International Journal of Kannada Research
www.kannadajournal.com

**ISSN: 2454–5813**
IJKR 2023; 9(3): 109-110
© 2023 IJKR
www.kannadajournal.com
Received: 12-06-2023
Accepted: 16-07-2023

**ಡಾ. ರಾಮಚಂದ್ರಪ್ಪ.ವಿ.**
ಸಹ ಪ್ರಾಧ್ಯಾಪಕರು, ಸರ್ಕಾರಿ ವಿಜ್ಞಾನ ಕಾಲೇಜು, ನೃಪತುಂಗ ರಸ್ತೆ, ಬೆಂಗಳೂರು, ಕರ್ನಾಟಕ, ಭಾರತ

**Corresponding Author:**
**ಡಾ. ರಾಮಚಂದ್ರಪ್ಪ.ವಿ.**
ಸಹ ಪ್ರಾಧ್ಯಾಪಕರು, ಸರ್ಕಾರಿ ವಿಜ್ಞಾನ ಕಾಲೇಜು, ನೃಪತುಂಗ ರಸ್ತೆ, ಬೆಂಗಳೂರು, ಕರ್ನಾಟಕ, ಭಾರತ

# ಹಕ್ಕಿಗಳು ಮತ್ತು ಕೈಗಳು – ಎಂ.ಎಸ್.ಕೆ. ಪ್ರಭು

**ಡಾ. ರಾಮಚಂದ್ರಪ್ಪ.ವಿ.**

**ಪೀಠಿಕೆ**

ಪ್ರಸ್ತುತ ಜಾಗತೀಕ ಸಂದರ್ಭದಲ್ಲಿ ವಿಶ್ವದ ಕೆಲವು ಬಲಿಷ್ಠ ದೇಶಗಳು ತಮ್ಮ ಸಾಮ್ರಾಜ್ಯಶಾಯಿ ವಿಸ್ತರಣೆ ಧೋರಣೆಯಿಂದ ಹಲವು ದೇಶಗಳನ್ನು ಕಬಳಿಸುವ, ಗಡಿಗಳನ್ನು ಮೀರಿ ಸಾಮ್ರಾಜ್ಯವನ್ನು ವಿಸ್ತರಿಸಲು ಮುಂದಾಗಿರುವ ಈ ದಿನಮಾನಗಳಲ್ಲಿ ಎಲ್ಲೆಡೆ ಆತಂಕ ಮನೆಮಾಡಿದೆ. ಒಂದೆಡೆ ಪರಿಸರ ನಾಶ ಮತ್ತೊಂದೆಡೆ ಜಾಗತೀಕರಣದ ನೆಪದಲ್ಲಿ ನಡೆಯುತ್ತಿರುವ ವ್ಯಾಪಾರ ವ್ಯವಹಾರದ ಹುನ್ನಾರಗಳಿಗೆ ಕನ್ನಡಿಯಂತಿದೆ ಎಂ.ಎಸ್.ಕೆ. ಪ್ರಭು ಅವರ 'ಹಕ್ಕಿಗಳು ಮತ್ತು ಕೈಗಳು' ಕಥೆ.

ಎಂ.ಎಸ್.ಕೆ. ಪ್ರಭು ಅವರ 'ಹಕ್ಕಿಗಳು ಮತ್ತು ಕೈಗಳು' ಮುವ್ವತ್ತೆರಡು ಪುಟಗಳಷ್ಟು ವ್ಯಾಪಿಸಿರುವ ದೀರ್ಘವಾದ ಕತೆ. ಇಲ್ಲಿ ಪ್ರಭು ಅವರ ಮೂಲದ್ರವ್ಯವಾದ ಫ್ಯಾಂಟಸಿಯೇ ಮುಖ್ಯ ಭೂಮಿಕೆಯಾಗಿದೆ. ಮನುಷ್ಯ ಮತ್ತು ಪರಿಸರದ ನಡುವಣ ಸಂಬಂಧವನ್ನೂ ಆಳವಾಗಿ ಶೋಧನೆ ಒಳಗುಮಾಡುವುದರ ಜೊತೆಗೆ ಪರಿಸರವನ್ನು ತಮ್ಮ ಸ್ವಾರ್ಥಕ್ಕೆ ಬಳಸಿಕೊಳ್ಳುತ್ತಿರುವ ಆಧುನಿಕ ಜಗತ್ತು ಪರಿಸರ ಮತ್ತು ಸಮಾಜದ ಮೇಲೆ ಉಂಟುಮಾಡುತ್ತಿರುವ ಅನಾಹುತಗಳ ಸರಮಾಲೆಗಳನ್ನು ಈ ಕತೆ ಯಾವುದೇ ಅಬ್ಬರವಿಲ್ಲದೇ ಓದುಗರ ಮುಂದಿಡುತ್ತದೆ.

ಜನಪದ ಅಥವಾ ಪೌರಾಣಿಕ ಅದ್ಭುತ ರಮ್ಯತೆಯನ್ನು ಹೋಲುವ ರೀತಿಯಲ್ಲಿ ಕಥೆ ಆರಂಭವಾಗುತ್ತದೆ. ಈ ಕಥೆ ನಡೆಯುವುದು ಒಂದು ದ್ವೀಪದಲ್ಲಿ. ಶಾಲ್ಮಲೀ ಎಂಬುದೊಂದು ದ್ವೀಪ, ಅಲ್ಲಿನ ಜನರಿಗೆ ಯಾವುದೇ ರೋಗರುಜಿನಗಳಿರಲಿಲ್ಲ. ನೆಮ್ಮದಿ–ಸುಖ ಸಂತೋಷದ ಬಾಳು ಅಲ್ಲಿನ ಜನಗಳದು. ಅದಕ್ಕೇನು ಕಾರಣವೆಂದರೆ ಅಲ್ಲಿ ಅಸಂಖ್ಯಾತವಾಗಿ ನೆಲೆಸಿದ್ದ ಕಲವಿಂಕ ಪಕ್ಷಿ ಸಂಕುಲ. ವಿಶೇಷವೆಂದರೆ ಈ ಪಕ್ಷಿಗಳು ಸದಾ ನೆಲದ ಮೇಲೆ ಓಡಾಡಿಕೊಂಡಿದ್ದು ತಮ್ಮ ಸಂಪರ್ಕ ಹೊಂದಿದ್ದ ಭೂಮಿಗೂ ಅಲ್ಲಿನ ವಾಸಿಗಳಿಗೂ ಸದಾ ನೆಮ್ಮದಿಯನ್ನುಂಟುಮಾಡುತ್ತಿದ್ದುವು. ಇವು ಮನುಷ್ಯನಿಗೂ ಮೊದಲೇ ಇಲ್ಲಿ ಅವತರಿಸಿದ್ದವು. ಇಲ್ಲಿನ ಜನರ ಆಯುರಾರೋಗ್ಯ ಐಶ್ವರ್ಯಾದಿ ಕ್ಷೇಮ ಸಂಪತ್ತಿಗೆ ಈ ಕಲವಿಂಕಗಳೇ ಕಾರಣವಾಗಿರುತ್ತವೆ. ವಿಶೇಷವೆಂದರೆ ಇವು ಹಾರದೆ ಸದಾ ನಡೆದಾಡುತ್ತಿದ್ದರಿಂದ ಯಾರಾದರೂ ಇವುಗಳನ್ನು ಮುಟ್ಟಬಹುದಿತ್ತು. ಅವುಗಳ ಸ್ಪರ್ಶವು ಅವರನ್ನು ಎಲ್ಲ ನೋವುಗಳಿಂದ ಮುಕ್ತಗೊಳಿಸುತ್ತಿತ್ತು.

ಹೀಗಿರುವಾಗ ಒಂದು ದಿನ ದಕ್ಷಿಣ ಸಮುದ್ರ ತೀರದಿಂದ ಅಪರಿಚಿತ ವ್ಯಕ್ತಿಯೊಬ್ಬ ಬಂದು ನಿಧಾನಕ್ಕೆ ಈ ಜನ ಮತ್ತು ಕಲವಿಂಕಗಳ ಮೇಲೆ ಹಿಡಿತವನ್ನು ಸಾಧಿಸುತ್ತ ಹೋಗುತ್ತಾನೆ. ಅವನ ಕತ್ತೆ ಸವಾರಿಯೇ ಅಲ್ಲಿನ ಜನಕ್ಕೆ ಹೊಸ ವಿಷಯ. ಕ್ರಮೇಣ ಅವನು ಆ ಎಲ್ಲ ಜನರ ಮುಂದಾಳಾಗುತ್ತಾನೆ. ಅವನಿಗೆ ಕಲವಿಂಕದ ಸ್ಪರ್ಶದಿಂದ ಎಲ್ಲ ಬಗೆಯ ಅನುಕೂಲವಾಗುತ್ತದೆ. ಮೊದಲ ಬಾರಿಗೆ ಅವನು ಕಲವಿಂಕಗಳನ್ನು ಕೈಯಲ್ಲಿ ಹಿಡಿದುಕೊಳ್ಳುತ್ತಾನೆ. ಅದನ್ನು ಆ ಜನರೂ ಅನುಸರಿಸುತ್ತಾರೆ. ಇಲ್ಲಿಂದಲೇ ಅವರ ಮತ್ತು ಕಲವಿಂಕಗಳ ದುರಂತಕ್ಕೆ ನಾಂದಿಯಾಗುತ್ತದೆ. ಕ್ರಮೇಣ ಅವನು ಕಲವಿಂಕಗಳನ್ನು ಹಿಡಿದು ಪಂಜರಕ್ಕೆ ಸೇರಿಸುವ ಕೆಲಸ ಮಾಡುತ್ತಾನೆ, ತನಗೆ ನೆರವಾಗುವಂತೆ ಅವರಿಗೂ ಕೇಳುತ್ತಾನೆ. ಅಪನಂಬಿಕೆ ವ್ಯಕ್ತಪಡಿಸುವ ಜನರನ್ನು ಹೇಗೋ ಸಮಾಧಾನಪಡಿಸುತ್ತಾನೆ.

ಒಟ್ಟಿನಲ್ಲಿ ಈಗ ಎಲ್ಲರೂ ಕಲವಿಂಕಗಳನ್ನು ಹಿಡಿದು ಪಂಜರಕ್ಕೆ ತುಂಬತೊಡಗುತ್ತಾರೆ. ಆಗ ಆ ಹಕ್ಕಿಗಳೂ ಎಚ್ಚರಗೊಳ್ಳುತ್ತವೆ. ಇವರ ಕೈಗೆ ಸಿಕ್ಕದಂತೆ ಮೇಲೆ ಹಾರತೊಡಗುತ್ತವೆ. ಇವರು ಅವುಗಳ ಹಿಂದೆ ಓಡುತ್ತಾ ಹೋದರೂ ಪ್ರಯೋಜನವಾಗುವುದಿಲ್ಲ. ಕಲವಿಂಕಗಳ ಅಗಲುವಿಕೆಯಿಂದ ಎಲ್ಲ ರೀತಿಯಿಂದಲೂ ಅಲ್ಲಿನ ಜನದ ಬದುಕು ಕಷ್ಟನಷ್ಟಗಳಿಂದ ತುಂಬಿ ದುಃಖಪೂರಿತವಾಗುತ್ತದೆ.

ಆ ನಾಯಕನ ನಿರ್ದೇಶನದಂತೆ ಕೈಗಳನ್ನು ಉದ್ದ ಮಾಡಿಕೊಂಡು ಅಂದರೆ ಕೈಗಳಿಗೆ ಹತ್ತು ಅಡಿ ಉದ್ದದ ಮರದ ಕೈಗಳನ್ನು ತೋಳುಗಳಿಗೆ ಕಟ್ಟಿಕೊಂಡು ಅವುಗಳನ್ನು ಹಿಡಿಯ ಹೋಗುತ್ತಾರೆ. ಅವು ಇನ್ನೂ ಮೇಲಕ್ಕೆ ಹಾರುತ್ತವೆ. ಅಷ್ಟರಲ್ಲಿ ಅವರಿಗೋ ಬಗೆ ಬಗೆಯ ರೋಗ ರುಜಿನ ಅಂಟಿಕೊಳ್ಳಲು ಆರಂಭವಾಗುತ್ತವೆ. ನಾಯಕನೇ ಅವರಿಗೆ ಔಷಧಿ ಒದಗಿಸುತ್ತಾನೆ. ಮರದ ಕೈಗಳಿಂದ ಉಪಯೋಗವಿಲ್ಲ ಎಂದಾಗ ತಾವೇ ದೀರ್ಘಬಾಹುಗಳಾಗಿ ಬೆಳೆಯಬೇಕೆಂದು ಅವರಿಗೆ ಸೂಚನೆ ಕೊಡುತ್ತಾನೆ ಮತ್ತು ಅದಕ್ಕಾಗಿ ಅವನೇ ಅವರಿಗೆ ಮೊದಲು ಮುಲಾಮನ್ನು ಕೊಡುತ್ತಾನೆ. ಇದರಿಂದ ಕೈಗಳು ಸ್ವಲ್ಪ ಬೆಳೆದರೂ ಅಡ್ಡ ಪರಿಣಾಮ ಶುರುವಾಗುತ್ತದೆ. ಒಟ್ಟಿನಲ್ಲಿ ಅವರ ಕೈಗಳು ಬೆಳೆದಷ್ಟೂ ಹಕ್ಕಿಗಳಿನ್ನೂ ಮೇಲೆ ಮೇಲೆ ಹೋಗುತ್ತವೆ. ಅವುಗಳನ್ನು ಬೆನ್ನಟ್ಟಿ ಮೇಲೆ ನೋಡುತ್ತಾ ಓಡಾಡುತ್ತಿದ್ದ ಜನಕ್ಕೆ ನೆಲ ನೋಡುವ ಅಭ್ಯಾಸ ತಪ್ಪಿ, ಅದರಿಂದ ಅನೇಕ ಅವಘಡಗಳಾಗುತ್ತವೆ. ಜನ ರೋಗಗ್ರಸ್ತರಾಗಿ ಸಾಯತೊಡಗುತ್ತಾರೆ. ದ್ವೀಪದ ಜನಸಂಖ್ಯೆ ಕಡಿಮೆಯಾಗುತ್ತಾ ನಡೆಯುತ್ತದೆ.

ಈಗ ಆ ನಾಯಕ ಜನಗಳ ಉದ್ಧಾರಕಾಗಿ, ಹಕ್ಕಿಗಳು ಕೆಳಕ್ಕೆ ಇಳಿಯುವುದಕ್ಕಾಗಿ ಯಾಗ ಮಾಡಿಸುತ್ತಾನೆ ಉಪಯೋಗವಾಗುವುದಿಲ್ಲ. ಅವನು ಇನ್ನೊಂದು ಸಲಹೆ ಕೊಡುತ್ತಾನೆ. ದ್ವೀಪದ ಜನವೆಲ್ಲ ಸಮುದ್ರ ದಡದೊಳಗೆ ನಿಂತು ಕೈ ಮೇಲಕ್ಕೆತ್ತಿ ನಿಲ್ಲಬೇಕು, ಕಲವಿಂಕಗಳು ಹತ್ತಿರ ಬಂದುದೆ ತಡ ಎಲ್ಲರೂ ಕೈಗಳನ್ನು ಸ್ವಲ್ಪ ಮುಂದೆ ಬಾಗಿಸಿ ದ್ವೀಪದ ಮಧ್ಯೆ ಪಂಜರ ರಚಿಸಬೇಕು. ಆಗ ಅವು ತಪ್ಪಿಸಿಕೊಳ್ಳುವುದಿಲ್ಲ ಎನ್ನುತ್ತಾನೆ. ಜನ ಹಾಗೂ ಮಾಡುತ್ತಾರೆ. ಎಷ್ಟು ವರ್ಷ ಕಳೆದರೂ ಒಂದು ಹಕ್ಕಿಯೂ ಸಿಕ್ಕುವುದಿಲ್ಲ. ಒಂದು ದಿನ ಸಮುದ್ರದಲ್ಲಿ ದೊಡ್ಡ ಅಲೆಗಳು ಕಾಣಿಸಿಕೊಂಡು ಅಪ್ಪಳಿಸುತ್ತವೆ. ಜನ ಮರಳಿನಲ್ಲಿ ಕುಸಿಯುತ್ತಾರೆ. ಆಕಾಶದಲ್ಲಾದರೋ ಭೀಕರವಾದ ಮೋಡಗಳು ಕವಿದು ಬಿರುಗಾಳಿ ಸಹಿತ ಮಳೆ ಸುರಿಯುತ್ತದೆ. ಇಲ್ಲಿಗೆ ಕತೆಯು ಮುಕ್ತಾಯವಾಗುತ್ತದೆ.

ಆಧುನೀಕತೆ, ಅಭಿವೃದ್ಧಿಯ ಹೆಸರಿನಲ್ಲಿ ದ್ವೀಪಗಳಲ್ಲಿ, ಕಾಡುಗಳಲ್ಲಿ ವಾಸಿಸುವ ಬುಡಕಟ್ಟು ಸಮುದಾಯದ ಬದುಕನ್ನು ಹಸನುಗೊಳಿಸುತ್ತೇವೆಂಬ ಭ್ರಮೆಯನ್ನು ಬಿತ್ತಿ ಅವರನ್ನು ನಿರ್ವಸಿತಿಕರನ್ನಾಗಿಸುವ ಅವರ ಸಹಜ ಬದುಕನ್ನು ಕಸಿದುಕೊಂಡಿರುವ ' ಎಷ್ಟೋ ನಿದರ್ಶನಗಳು ಈ ಕಥೆಯನ್ನು ಓದುತ್ತಿದ್ದಂತೆ ಮನಃಪಟಲದಲ್ಲಿ ಸಹಜವಾಗಿ ಮೂಡುತ್ತವೆ. ಕೊಲೆ, ಸುಲಿಗೆ, ಲೋಭ, ಪ್ರಲೋಭನೆ, ರೋಗ–ರುಜಿನಗಳು, ಆಸ್ಪತ್ರೆ–ವೈದ್ಯರು, ವ್ಯಾಜ್ಯ–ಲಾಯರುಗಳು ಒಂದೂ ಇಲ್ಲದ, ಬೇಕಾದ ವಸ್ತು ಬೇಕಾದ ಕಾಲದಲ್ಲಿ ದೊರಕುವಂತಿದ್ದ ಶಾಲ್ಮಲೀ ದ್ವೀಪಕ್ಕೆ ಒಬ್ಬ ಕಲಿಪುರುಷ ಕತ್ತೆಯ ಮೇಲೆ ಕುಳಿತು ಪ್ರವೇಶ ಮಾಡಿ ನಿಧಾನಕ್ಕೆ ಅಲ್ಲಿನ ಮುಗ್ಧ ಜನರ ಸಹಜ ಬದುಕನ್ನು ತನ್ನ ಜ್ಞಾನ–ದಬ್ಬಾಳಿಕೆ, ಕ್ರೌರ್ಯಗಳ ಮೂಲಕ ಪಲ್ಲಟಗೊಳಿಸುತ್ತಾನೆ. ಅಲ್ಲಿನ ನೆಲವನ್ನು ಆಕ್ರಮಿಸಿಕೊಂಡು, ಆ ಜನರ ನೆಮ್ಮದಿಗೆ ಕಾರಣವಾಗಿದ್ದ ಕಲವಿಂಕಗಳನ್ನು ಬಂಧಿಸಿ ಅವುಗಳ ಸಾವಿಗೆ, ಜನಗಳ ದುಸ್ಥಿತಿಗೆ ಕಾರಣನಾಗುತ್ತಾನೆ. ಮುಗ್ಧರಲ್ಲಿ ದುರಾಶೆಯನ್ನು ಹುಟ್ಟು ಹಾಕಿ ಅವರ ಬದುಕಿನ ದುರಂತಕ್ಕೆ ಕಾರಣನಾಗುತ್ತಾನೆ.

ಇದೊಂದು ರೀತಿಯ ರಾಜಕೀಯ ಹುನ್ನಾರವೇ! ಬಂಡವಾಳಶಾಹಿ ವ್ಯವಸ್ಥೆಯ ಅಥವಾ ಜಾಗತೀಕರಣದ ಆಕ್ರಮಣದಂತಿದೆ. ಇಲ್ಲಿ ಒಬ್ಬ ನಾಯಕನ ಆಗಮನದಿಂದ ರಾಜಕೀಯ ತಂತ್ರಗಾರಿಕೆಯ ಗಂಧಗಾಳಿಯೇ ತಿಳಿಯದ, ಪ್ರತಿಭಟನೆ ಹೋರಾಟದ ವಿಚಾರಗಳೇ ಗೊತ್ತಿಲ್ಲದ್ದ ಅಲ್ಲಿನ ನಿವಾಸಿಗಳು ಇವನ ಮಾರ್ಗದರ್ಶನದಿಂದ ಅವರುಗಳಲ್ಲಿ ಕುರುಡು ಹಿಂಬಾಲಿಕೆ ಆರಂಭವಾಗಿ ಅವರು ಅವನ ಹುಚ್ಚಾಟಗಳನ್ನೆಲ್ಲಾ ನಂಬಿ ಹಿಂಬಾಲಿಸಿ, ಆ ಕಾರಣದಿಂದಲೇ. ಅವರು ತಮ್ಮ ಹರ್ಷ, ಸುಖದ ಪ್ರತೀಕವಾದ ಕಲವಿಂಕಗಳ ಬಂಧನವನ್ನು ಪ್ರತಿಭಟಿಸುವ ಬದಲು ತಮ್ಮ ಹಿತದ ಭ್ರಮೆಯಲ್ಲಿ ತಾವೂ ಕಲವಿಂಕಗಳನ್ನು ಬಂಧಿಸಲು ಮುಂದಾಗುತ್ತಾರೆ. ಮುಂದೆ ಈ ಹಕ್ಕಿಗಳು ಇವರಿಂದ ದೂರಕ್ಕೆ ಹಾರಲು ತೊಡಗಿದಾಗ ಆ ಹಕ್ಕಿಗಳನ್ನು ಹಿಡಿಯಲೋಸುಗ ಎಲ್ಲರೂ ಔಷಧಿ ಬಳಸಿ ಕೈಗಳನ್ನು ಉದ್ದ ಮಾಡಿಕೊಳ್ಳುವ ಪ್ರಕ್ರಿಯೆ ನಡೆಯುತ್ತವೆ. ವಸಾಹತುಶಾಹಿ ಪ್ರವೃತ್ತಿಯ ಎಲ್ಲ ಲಕ್ಷಣಗಳು ಇಲ್ಲಿ ಕಂಡು ಬರುತ್ತದೆ. ಇಂದು ಔಷಧ ಮಾಫಿಯಾ, ಮಲ್ಟೀ ಸ್ಪೆಶಾಲಿಟಿ ಆಸ್ಪತ್ರೆಗಳು, ಲ್ಯಾಬ್‌ಗಳು ಯಾವೆಲ್ಲಾ ರೀತಿಯಲ್ಲಿ ಸಾಮಾನ್ಯ ಜನರನ್ನು ಹಿಂಡುತ್ತಿವೆ ಎಂಬುದು ಗುಟ್ಟಿನ ವಿಷಯವೇನಲ್ಲ! ವಾಣಿಜ್ಯೀಕರಣ ಪ್ರಕ್ರಿಯೆ ಎಷ್ಟು ವಿಡಂಬನಾತ್ಮಕವಾಗಿದೆ ಎಂದರೆ ಕೈ ಉದ್ದ ಮಾಡುವ ಔಷಧಿ ತಯಾರಿಕೆ ಮತ್ತು ಮಾರಾಟ ಪ್ರಕ್ರಿಯೆ ಇಡೀ ಪ್ರದೇಶವನ್ನು ತನ್ನ ನಿಯಂತ್ರಣಕ್ಕೆ ತೆಗೆದುಕೊಂಡು ಎಲ್ಲ ರೀತಿಯಿಂದಲೂ ನಿಯಂತ್ರಿಸುತ್ತದೆ.

ಈ ಕತೆಯ ಆಶಯವೂ ದೊಡ್ಡದು. ಮನುಷ್ಯ ಮತ್ತು ಪರಿಸರದ ನಡುವಿನ ಸಂಬಂಧವನ್ನು ಆಳವಾಗಿ ಶೋಧಿಸುತ್ತದೆ. ಕಲವಿಂಕಗಳ ಕಾರಣದಿಂದ ಶಾಲ್ಮಲೀ ದ್ವೀಪದ ಇಂಥ ಮುಗ್ಧ ಪ್ರಪಂಚಕ್ಕೆ ಕಲಿಯ ರೀತಿಯ ವ್ಯಕ್ತಿಯೊಬ್ಬ ಕತ್ತೆಯನ್ನೇರಿ ಬಂದು ನಿಧಾನವಾಗಿ ಎಲ್ಲವನ್ನೂ ತನ್ನ ಹಿಡಿತಕ್ಕೆ ತೆಗೆದುಕೊಂಡು ದಬ್ಬಾಳಿಕೆ, ಕ್ರೌರ್ಯದ ಮೂಲಕ ಇಡೀ ವ್ಯವಸ್ಥೆಯನ್ನು ಪಲ್ಲಟಗೊಳಿಸುತ್ತಾನೆ. ಆ ನೆಲವನ್ನೇ ಆಕ್ರಮಿಸುತ್ತಾನೆ. ಜನವೆಲ್ಲ ಅವನ ಅಧೀನರಾಗುತ್ತಾರೆ. ಪರ್ಯಾಯವಾಗಿ ಆ ಜನರೆಲ್ಲರ ದುರಂತಕ್ಕೀಡಾಗುತ್ತಾರೆ. (ಭಾರತಕ್ಕೆ ಬ್ರಿಟೀಷರ ಆಗಮನದ ವಿಚಾರವೂ ಓದುಗನ ಮನದಲ್ಲಿ ಸಹಜವಾಗಿ ಸುಳಿಯುತ್ತದೆ)

'ಹಕ್ಕಿಗಳು' ಜೀವ ಸಮೃದ್ಧಿಯ ಎಲ್ಲವನ್ನೂ ಪ್ರತಿನಿಧಿಸಿದರೆ, ಕೈಗಳು ಜೀವ ವಿರೋಧಿ ದಬ್ಬಾಳಿಕೆ, ಅಜ್ಞಾನ, ದುರಾಶೆಜನ್ಯ ಆಕ್ರಮಣಶೀಲತೆಯನ್ನು ಸೂಚಿಸುತ್ತವೆ. ಅಜ್ಞಾನ, ದುರಾಸೆಯ ಮೂಲದ ಈ ಆಕ್ರಮಣ ಮೊದಲು ನಿಸರ್ಗದ ಮೇಲಾಗುತ್ತದೆ. ಆ ಮೂಲಕ ತಮ್ಮ ವಿನಾಶಕ್ಕೆ ತಾವೇ ಕಾರಣರಾಗುತ್ತಾರೆ. ಕಲವಿಂಕಗಳು ನೆಲದ ಜೀವದ್ರವ್ಯವಾದ ದೈವಿಕತೆಯಂತೆ ಇದ್ದರೆ, ಜನರ ಕೈಗಳು ಎಲ್ಲವನ್ನೂ ಬಾಚಿಕೊಳ್ಳುವ ದುರಾಶೆಯಂತೆ ಕಂಡುಬರುತ್ತವೆ. ಹೀಗೆ ಈ ಕತೆ ಅನೇಕ ಒಳಸುಳಿಗಳನ್ನು ಅರ್ಥಗರ್ಭಿತವಾಗಿ ದಾಖಲಿಸುತ್ತದೆ. ಪ್ರಸ್ತುತ ಸಂದರ್ಭದಲ್ಲಿನ ಎಷ್ಟೋ ವಿಚಾರಗಳಿಗೆ ಕಾರಣಗಳನ್ನು ಮತ್ತು ಎಚ್ಚೆತ್ತುಕೊಳ್ಳದಿದ್ದರೆ ಮುಂದೊದಗಬಹುದಾದ ವಿಪತ್ತುಗಳನ್ನು ಯಾವುದೇ ಆಕ್ರೋಶ, ಭಾವಾವೇಶವಿಲ್ಲದೆ ಓದುಗನ ಮನದಲ್ಲಿ ಹಲವು ತೆರನಾದ ಆಲೋಚನೆಗಳನ್ನು ಹುಟ್ಟುಹಾಕುತ್ತದೆ. ಎಂ.ಎಸ್.ಕೆ. ಪ್ರಭು ಅವರ ಫ್ಯಾಂಟಸಿ ಕಥನ ಕೌಶಲಕ್ಕೆ ಈ ಕಥೆಯೊಂದು ನಿದರ್ಶನವಾಗಿದೆ.

## ಆಕರ ಗ್ರಂಥಗಳು

1. ಎಂ.ಎಸ್.ಕೆ ಪ್ರಭು, 2017, ಸಮಗ್ರ ಕತೆಗಳು (ಪ್ರ) ಸಾಹಿತ್ಯ ಭಂಡಾರ, ಬೆಂಗಳೂರು.
2. ಎಂ.ಎಸ್. ಸೋಮಶೇಖರ, ಎಚ್.ವಿ. ವೆಂಕಟಸುಬ್ಬಯ್ಯ, ಶ್ರೀಕಂಠ ಗುಂಡಪ್ಪ (ಸಂ) 2014, ಫ್ಯಾಂಟಸಿ ಪ್ರಭು, (ಪ್ರ) ಸಾಹಿತ್ಯ ಭಂಡಾರ, ಬೆಂಗಳೂರು.